ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
DEPARTMENT / SUBJECT
NEWS PAPER
DATE

## 2 ಆರೋಪಗಳಲ್ಲಿ ಪ್ರಸ್ತಾವನೆ ಅಂಗೀಕಾರ | ಬಹುಮತ ಇರುವ ಕಾರಣ ಪದಚ್ಯುತಿ ಭೀತಿ ಕಡಿಮೆ

# ಟ್ರಂಪ್ ಮಹಾಭಿಯೋಗ ಗೊತ್ತುವಳಿ

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ಮಂಡನೆಯಾಗಿದ್ದ ಮಹಾಭಿಯೋಗ ಗೊತ್ತುವಳಿಯನ್ನು ಅಲ್ಲಿನ ಸಂಸತ್ತಿನ ಕೆಳಮನೆ (ಹೌಸ್ ಆಫ್ ರೆಪ್ರಸಂಟೇಟಿವ್ಸ್) ಬುಧವಾರ ತಡ ರಾತ್ರಿ ಅಂಗೀಕರಿಸಿದೆ. ಅಧಿಕಾರ ದುರುಪಯೋಗ ಮತ್ತು ಸಂಸತ್ತಿಗೆ ಅಡ್ಡಿಪಡಿಸಿದ್ದ ಎರಡು ಪ್ರತ್ಯೇಕ ಆರೋಪಗಳ ಮೇಲೆ ಗೊತ್ತುವಳಿ ಮಂಡನೆಯಾಗಿದ್ದು ಎರಡರ ಮೇಲೂ ಪ್ರತ್ಯೇಕ ಮತದಾನ ನಡೆಯಿತು. ಅಧಿಕಾರ ದುರುಪಯೋಗ ಕುರಿತ ಮಹಾಭಿಯೋಗ ಗೊತ್ತುವಳಿ ಪರವಾಗಿ 230 ಹಾಗೂ ವಿರುದ್ಧವಾಗಿ 197 ಸಂಸದರು ಮತ ಚಲಾಯಿಸಿದರು. ಇನ್ನೊಂದು ಗೊತ್ತುವಳಿ ಪರವಾಗಿ 229 ಹಾಗೂ ವಿರುದ್ಧವಾಗಿ 198 ಮತಗಳು ಬಿದ್ದವು.

ಟ್ರಂಪ್ ದೇಶಕ್ಕೆ ಅಪಾಯಕಾರಿ ವ್ಯಕ್ತಿ. ಆಧುನಿಕ ಕಾಲದ ಅಧ್ಯಕ್ಷೀಯ ಅಧಿಕಾರಾವಧಿಯಲ್ಲಿ ಅಳಿಸಲಾಗದ ಕಪ್ಪುಚುಕ್ಕೆ ಎಂದು ಡೆಮಾಕ್ರಟಿಕ್ ಸದಸ್ಯರು ಆಪಾದಿಸಿದರು. ರಿಪಬ್ಲಿಕನ್ ಮತ್ತು ಡೆಮಾಕ್ರಟಿಕ್ ಸದಸ್ಯರ ನಡುವೆ ತೀಕ್ಷ್ಣ ವಾದ-ಪ್ರತಿವಾದದ ಸಮರದ ನಂತರ ಗೊತ್ತುವಳಿಗಳನ್ನು ಮತಕ್ಕೆ ಹಾಕಲಾಗಿತ್ತು.

ಸಂಸತ್ತಿನ ಮೇಲ್ಮನೆ ಸೆನೆಟ್‌ನಲ್ಲಿ ಆಡಳಿತ ಪಕ್ಷ ರಿಪಬ್ಲಿಕನ್ ಬಹುಮತ ಹೊಂದಿದ್ದು, ಟ್ರಂಪ್‌ರನ್ನು ಆರೋಪದಿಂದ ಖುಲಾಸೆಗೊಳಿಸುವ ನಿರೀಕ್ಷೆಯಿದೆ. ಸೆನೆಟ್‌ನಲ್ಲಿ ರಿಪಬ್ಲಿಕನ್ 67 ಹಾಗೂ ಡೆಮಾಕ್ರಟಿಕ್ 47 ಸ್ಥಾನ ಹೊಂದಿದ್ದಾರೆ. ಗೊತ್ತುವಳಿ ಅಂಗೀಕಾರವಾಗಲು ಅಗತ್ಯವಾದ ಮೂರನೇ ಎರಡು ಬಹುಮತಕ್ಕೆ ಡೆಮಾಕ್ರಟಿಕ್ ಪಕ್ಷಕ್ಕೆ ಇನ್ನೂ 20 ಸದಸ್ಯರ ಬೆಂಬಲ ಅಗತ್ಯ. ಅಧಿಕಾರಕ್ಕೆ ಬಂದ 1062ನೇ ದಿನ ಟ್ರಂಪ್ ಮಹಾಭಿಯೋಗಕ್ಕೆ ಗುರಿಯಾಗಿದ್ದಾರೆ.

**ಯಾಕೆ ಮಹಾಭಿಯೋಗ?:** 2020ರ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಪ್ರಮುಖ ಆಕಾಂಕ್ಷಿಯಾಗಿರುವ ಜೋಸೆಫ್ ಬಿಡೆನ್ ವಿರುದ್ಧ ತನಿಖೆ ನಡೆಸಲು ಉಕ್ರೇನ್ ಮೇಲೆ ಒತ್ತಡ ಹೇರಲು ಟ್ರಂಪ್ ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂಬುದು ಒಂದು ಆರೋಪ. ಮಹಾಭಿಯೋಗ ಪ್ರಕ್ರಿಯೆ ವೇಳೆ ಕಾಂಗ್ರೆಸ್‌ಗೆ (ಸಂಸತ್ತು) ಅಡ್ಡಿಯುಂಟು ಮಾಡಿದ್ದು ಎರಡನೇ ಆರೋಪವಾಗಿದೆ. ಉಕ್ರೇನ್‌ನೊಂದಿಗಿನ ವ್ಯವಹಾರದಿಂದ ಟ್ರಂಪ್, ಅಮೆರಿಕದ ಚುನಾವಣೆಗಳ ವಿಶ್ವಾಸಾರ್ಹತೆಗೆ ಮತ್ತು ರಾಷ್ಟ್ರೀಯ ಭದ್ರತೆಗೆ ಭಂಗವುಂಟುಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಟ್ರಂಪ್, ಸೆನೆಟ್‌ನಲ್ಲೂ ವಿಚಾರಣೆ ಎದುರಿಸಲಿರುವ ಅಮೆರಿಕದ ಮೂರನೇ ಅಧ್ಯಕ್ಷರಾಗಲಿದ್ದಾರೆ. ಕೆಳಮನೆಯಲ್ಲಿ ಛೀಮಾರಿಗೆ ಒಳಗಾಗಿರುವ ಟ್ರಂಪ್‌ರನ್ನು ಅಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸಬೇಕೇ ಬೇಡವೇ ಎನ್ನುವುದನ್ನು ಸೆನೆಟ್ ನಿರ್ಧರಿಸಲಿದೆ. ಅಧ್ಯಕ್ಷ ಸ್ಥಾನಕ್ಕೆ ಮರು ಆಯ್ಕೆ ಬಯಸಿರುವ ಟ್ರಂಪ್, ಇನ್ನೂ ಒಂದು ವರ್ಷ ಅಧಿಕಾರಾವಧಿ ಹೊಂದಿದ್ದಾರೆ.

**ಅಸಾಂವಿಧಾನಿಕ ಎಂದ ಟ್ರಂಪ್:** ತಮ್ಮ ವಿರುದ್ಧದ ಮಹಾಭಿಯೋಗ, ಸಾಂವಿಧಾನಿಕ ಅಧಿಕಾರದ ದುರುಪಯೋಗವಾಗಿದೆ. ಇದು ಸೇಡಿನ ಕ್ರಮವೂ ಆಗಿದೆ ಎಂದು ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರಿಗೆ ಬರೆದ ಪತ್ರದಲ್ಲಿ ಟ್ರಂಪ್ ಆಪಾದಿಸಿದ್ದಾರೆ. ದೇಶದ 243 ವರ್ಷ ಇತಿಹಾಸದಲ್ಲಿ ಇಬ್ಬರು ಅಧ್ಯಕ್ಷರು ಮಾತ್ರ ಈ ಕ್ರಮಕ್ಕೆ ಗುರಿಯಾಗಿದ್ದಾರೆ. 1868ರಲ್ಲಿ ಆಂಡ್ರೂ ಜಾನ್ಸನ್ ಮತ್ತು 1998ರಲ್ಲಿ ಬಿಲ್ ಕ್ಲಿಂಟನ್ ವಿರುದ್ಧ ಮಹಾಭಿಯೋಗವಾಗಿತ್ತು. ಆದರೆ ಅವರಿಬ್ಬರನ್ನೂ ಮೇಲ್ಮನೆ ಸೆನೆಟ್ ಖುಲಾಸೆಗೊಳಿಸಿತ್ತು. ಟ್ರಂಪ್ ಕೂಡ ಇದೇ ವಿಶ್ವಾಸದಲ್ಲಿದ್ದಾರೆ. ಇನ್ನೊಬ್ಬ ಅಧ್ಯಕ್ಷ ರಿಚರ್ಡ್ ನಿಕ್ಸನ್, ಮಹಾಭಿಯೋಗ ಹಾಗೂ ವಿಚಾರಣೆ ಎದುರಿಸುವ ಮುನ್ನವೇ ರಾಜೀನಾಮೆ ನೀಡಿದ್ದರು.

**ಜನವರಿಯಲ್ಲಿ ಸೆನೆಟ್ ವಿಚಾರಣೆ:** ಸೆನೆಟ್‌ನಲ್ಲಿ 2020 ಜನವರಿಯಲ್ಲಿ ಮಹಾಭಿಯೋಗದ ವಿಚಾರಣೆ ನಡೆಯಲಿದೆ. ಅಮೆರಿಕದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಾನ್ ಜಿ ರಾಬರ್ಟ್ಸ್ ಜೂನಿಯರ್ ಪ್ರಕ್ರಿಯೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಟ್ರಂಪ್‌ರನ್ನು ಪದಚ್ಯುತಗೊಳಿಸಲು ಸೆನೆಟ್‌ನಲ್ಲಿ ಮೂರನೇ ಎರಡು ಬಹುಮತ, ಅಂದರೆ 67 ಸದಸ್ಯರ ಬೆಂಬಲ ಅಗತ್ಯ. ಸೆನೆಟ್‌ನಲ್ಲಿ ರಿಪಬ್ಲಿಕನ್ ಸಂಸದರ ಸಂಖ್ಯೆ 53 ಹಾಗೂ ಡೆಮಾಕ್ರಟಿಕ್ ಸದಸ್ಯರ ಸಂಖ್ಯೆ 47. ಹೀಗಾಗಿ ಟ್ರಂಪ್ ನಿರ್ದೋಷಿಯಾಗಿ ಹೊರಬರುತ್ತಾರೆ ಎಂಬುದು ವ್ಯಾಪಕ ನಿರೀಕ್ಷೆಯಾಗಿದೆ.

**ತುಳಸಿ ಗಬ್ಬಾರ್ಡ್ ನಡೆ:** ಎಲ್ಲ ರಿಪಬ್ಲಿಕನ್ನರು (197) ಎರಡೂ ಗೊತ್ತುವಳಿಗಳ ವಿರುದ್ಧವಾಗಿ ವೋಟ್ ಮಾಡಿದರು. ಆದರೆ ಡೆಮಾಕ್ರಟಿಕ್ ಸದಸ್ಯರಲ್ಲಿ ಇಬ್ಬರು ಮೊದಲ ಗೊತ್ತುವಳಿ ವಿರುದ್ಧವಾಗಿ ಹಾಗೂ ಎರಡನೇ ಗೊತ್ತುವಳಿಗೆ ಮೂವರು ವಿರುದ್ಧವಾಗಿ ಮತ ಚಲಾಯಿಸಿದರು. ಆದರೆ ಭಾರತ ಮೂಲದ ತುಳಸಿ ಗಬ್ಬಾರ್ಡ್ ಮಾತ್ರ ಎರಡೂ ಸಂದರ್ಭಗಳಲ್ಲಿ 'ಹಾಜರಾಗಿದ್ದೇನೆ' ಎಂದಷ್ಟೆ ನಮೂದಿಸಿದರು. ತುಳಸಿ 2020ರ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.



### ಜಗವೇ ನಗುತ್ತಿದೆ...



ಟ್ರಂಪ್ ವಿರುದ್ಧ ಇಡೀ ಜಗತ್ತೇ ನಗುತ್ತಿದೆ. ಅವರು ಜಾಗತಿಕ ನಾಯಕತ್ವಕ್ಕೆ ಅಸಮರ್ಥ ಹಾಗೂ ಅನರ್ಹ ಎಂಬುದು ಜಗತ್ತಿನ ಜನರಿಗೆ ತಿಳಿದಿದೆ ಎಂದು ಜೋಸೆಫ್ ಬಿಡೆನ್ ಟ್ವೀಟ್ ಮಾಡಿದ್ದಾರೆ. ಅಮೆರಿಕದಲ್ಲಿ ಅಧ್ಯಕ್ಷರನ್ನೂ ಒಳಗೊಂಡು ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ ಎಂದಿದ್ದಾರೆ.

### ಶ್ವೇತಭವನ ವಿಶ್ವಾಸ

ಮಹಾಭಿಯೋಗ ಗೊತ್ತುವಳಿ ಅಂಗೀಕಾರವಾಗಿರುವುದು ಅಮೆರಿಕದ ಇತಿಹಾಸದ ಅತ್ಯಂತ ನಾಚಿಕೆಗೇಡಿನ ರಾಜಕೀಯ ಪ್ರಹಸನಗಳಲ್ಲಿ ಒಂದಾಗಿದೆ ಎಂದು ಶ್ವೇತಭವನ ಹೇಳಿದೆ. 'ಕಾನೂನು, ನ್ಯಾಯ ಸಮ್ಮತತೆ ಹಾಗೂ ಸೂಕ್ತ ಪ್ರಕ್ರಿಯೆಗಳನ್ನು ಸೆನೆಟ್ ಮರು ಸ್ಥಾಪಿಸುವ ವಿಶ್ವಾಸ ಅಧ್ಯಕ್ಷರಿಗಿದೆ' ಎಂದು ಹೇಳಿಕೆಯೊಂದರಲ್ಲಿ ತಿಳಿಸಿದೆ. ರಿಪಬ್ಲಿಕನ್ನರಿಗೆ ಮೇಲ್ಮನೆ ಸೆನೆಟ್‌ನಲ್ಲಿ ಬಹುಮತವಿರುವುದರಿಂದ ಮಹಾಭಿಯೋಗ ಪ್ರಕ್ರಿಯೆಗೆ ಅಲ್ಲಿ ಅನುಮೋದನೆ ದೊರಕದು ಎಂಬ ಭರವಸೆಯಿಂದ ಶ್ವೇತಭವನ ಈ ಅಭಿಪ್ರಾಯಪಟ್ಟಿದೆ ಎನ್ನಲಾಗಿದೆ.